C.C.. No. 224/2019 CW:12 ,PW: 10

**1ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಪುತ್ತೂರು , ದ.ಕ.**

ಸಿ.ಸಿ. ನಂಃ 224/2019
ಸಿ.ಡಬ್ಲ್ಯೂಃ 12
ಪಿ.ಡಬ್ಲ್ಯೂಃ 10

ಸಾಕ್ಷಿದಾರರ ಹೆಸರುಃ ಚಂದ್ರಹಾಸ ನಾಯ್ಕ

ತಂದೆಯ ಹೆಸರುಃ ಸುಬ್ಬಯ್ಯ ನಾಯ್ಕ

ವಯಸ್ಸುಃ 44 ವರ್ಷ

ಉದ್ಯೋಗಃ ಕೂಲಿ

ವಾಸಸ್ಥಳಃ ಕನ್ಯಾನ, ಕರೋಪಾಡಿ ಗ್ರಾಮ

ದಿನಾಂಕ 07-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನನ್ನ ಮಾಲೀಕತ್ವದಲ್ಲಿ ಬೊಲೋರೋ ವಾಹನ ಇದೆ. ಅದರ ನೋಂದಣಿ ಸಂಖ್ಯೆ ಕೆಎ-38-6832 ಆಗಿರುತ್ತದೆ. ನನಗೆ ಆರೋಪಿ ಪ್ರಮೋದ್ ಕುಟಿನಾ ಪರಿಚಯ ಇದೆ. ದಿನಾಂಕ 25-09-2017 ರಂದು ನನ್ನ ವಾಹನ ಪ್ರಮೋದ್ ಕುಟಿನಾ ಮತ್ತು ಮಹಮ್ಮದ್ ಅರ್ಷದ್ ರವರ ಹತ್ತಿರ ಇತ್ತು. ಸಾಕ್ಷಿಗೆ ಕಲಂ 133 IMV ಕಾಯ್ದೆಯಡಿ ಪೊಲೀಸರು ನೀಡಿದ ನೋಟೀಸನ್ನು ಹಾಗೂ ಅದರಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ನೋಟೀಸನ್ನು ನಿ.ಪಿ.22 ಎಂದು ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿ.ಪಿ.22(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿ.ಪಿ.22 ಕ್ಕೆ ಕೊಟ್ಟ ಉತ್ತರವನ್ನು ತೋರಿಸಲಾಗಿ ಅದರಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯನ್ನು ನಿ.ಪಿ.23 ಎಂದು ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿ.ಪಿ.23(ಎ) ಎಂದು ಗುರುತಿಸಲಾಯಿತು.

2.ಪೊಲೀಸರು ನನ್ನ ಬೊಲೋರೋವನ್ನು ಜಪ್ತುಪಡಿಸಿಕೊಂಡಿದ್ದ ಸಂಬಂಧ ನೋಟೀಸು ಕೊಟ್ಟಿದ್ದರು. ಅಕ್ಟೋಬರ್ 2017 ರಲ್ಲಿ ಪೊಲೀಸರು ನನ್ನ ವಾಹನವನ್ನು ವಾಪಾಸ್ಸು ಕೊಟ್ಟಿದ್ದಾರೆ.

3. ಸಾಕ್ಷಿಗೆ ಒಂದು ಮಹಜರು ತೋರಿಸಲಾಗಿ ಅದರಲ್ಲಿನ ತಮ್ಮ ಸಹಿ ನೋಡಿ ಗುರುತಿಸಿದ್ದು ಸದರಿ ದಾಖಲೆಯನ್ನು ನಿ.ಪಿ.24ಎಂದು ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿ.ಪಿ.24(ಎ) ಎಂದು ಗುರುತಿಸಲಾಯಿತು. ನಿ.ಪಿ.24 ಕ್ಕೆ ವಾಹನವನ್ನು ನನಗೆ ಬಿಡುಗಡೆ ಮಾಡುವ ಕಾಲಕ್ಕೆ ಸಹಿ ಮಾಡಿದ್ದೇನೆ. ನನ್ನ ವಾಹನದ ಫೋಟೋ ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಗೆ ನಿ.ಪಿ.7 ರ ದಾಖಲೆ ತೋರಿಸಲಾಗಿ ಅದರಲ್ಲಿ ಕಾಣುವ ಬೊಲೋರೋ ವಾಹನ ತಮ್ಮದೆಂದು ಗುರುತಿಸಿರುತ್ತಾರೆ.

4. ಆರೋಪಿ ಪ್ರಮೋದ್ ಕುಟಿನಾ ರನ್ನು ನೋಡಿದರೆ ಗುರುತಿಸಬಲ್ಲೆ. ಈ ದಿನ ಆರೋಪಿ ಗೈರು ಹಾಜರಾಗಿದ್ದು ಅವರ ಗುರುತಿಸುವಿಕೆಯ ಬಗ್ಗೆ ಆರೋಪಿ ಪರ ವಕೀಲರು ತಮ್ಮ ತಕರಾರು ಇಲ್ಲ ಎಂದು ಹೇಳಿರುತ್ತಾರೆ.)

**<u>ಪಾಟೀ ಸವಾಲುಃ 1 ರಿಂದ 5, 7 ಮತ್ತು 8 ಆರೋಪಿತರ ಪರ ಶ್ರೀ. ಎ.ಕೆ.ಎ. ವಕೀಲರಿಂದಃ</u>**

5. ನಾನು ವಾಹನವನ್ನು ಬಾಡಿಗೆಗೆ ಕೊಡುವ ವ್ಯವಹಾರ ಮಾಡುವುದಿಲ್ಲ. ಪ್ರಮೋದ್ ನನಗೆ 2 ವರ್ಷಗಳಿಂದ ಪರಿಚಯ. ನಾನು ಪ್ರಮೋದ್ ಗೆ ನನ್ನ ವಾಹನವನ್ನು ಕೊಡುತ್ತಿದ್ದ ಬಗ್ಗೆ ಪ್ರತಿಫಲವನ್ನು ಪಡೆಯುತ್ತಿರಲಿಲ್ಲ. ವಾಹನವನ್ನು ಪ್ರಮೋದ್ ಗೆ ಕೊಡುತ್ತಿದ್ದ ಬಗ್ಗೆ ಕರಾರನ್ನು ಮಾಡಿಕೊಳ್ಳುತ್ತಿರಲಿಲ್ಲ. ನನಗೆ ಪೊಲೀಸರು ಹೇಳಿದ ಮಾಹಿತಿಯ ಮೇರೆಗೆ ನನ್ನ ವಾಹನದಲ್ಲಿ ಪ್ರಮೋದ್ ಮೆಣಸು ಸಾಗಾಟ ಮಾಡಿದ ಬಗ್ಗೆ ನನಗೆ ಗೊತ್ತಾಯಿತು. ನನಗೆ ಪ್ರತ್ಯಕ್ಷ ಮಾಹಿತಿ ಇಲ್ಲ.

6. ನಿ.ಪಿ.22 ರಿಂದ 24 ದಾಖಲೆಗಳಲ್ಲಿ ಏನೆಲ್ಲಾ ಬರೆಯಲಾಗಿದೆ ಎನ್ನುವ ಮಾಹಿತಿ ನನಗೆ ಇಲ್ಲ. ನನ್ನ ಸಮಕ್ಷಮ ಪೊಲೀಸರು ವಾಹನದ ಫೋಟೋ ತೆಗೆದಿಲ್ಲ.

7. ನಾನು ಪ್ರಮೋದ್ ಗೆ ಯಾವುದೇ ವಾಹನ ಕೊಟ್ಟಿಲ್ಲ ಎಂದರೆ ಸರಿಯಲ್ಲ.ನಾನು ಸುಳ್ಳು ಕೇಸಿಗೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ಈ ಪ್ರಕರಣದ ಸಂಬಂಧ ಯಾವುದೇ ನೋಟೀಸು ಕೊಟ್ಟಿಲ್ಲ ಮತ್ತು ಅದಕ್ಕೆ ನಾನು ಯಾವುದೇ ಉತ್ತರ ಕೊಟ್ಟಿಲ್ಲ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 6ನೇ ಆರೋಪಿತರ ಪರ ವಕೀಲರಿಂದಃ</u>**

6ನೇ ಆರೋಪಿ ಪರ ವಕೀಲರು 1 ರಿಂದ 5, 7 ಮತ್ತು 8 ನೇ ಆರೋಪಿ ಪರ ವಕೀಲರು ನಡೆಸಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಮರು ವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ, ಹೇ, ಕೇ, ಸರಿ ಇದೆ.

1ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಢಾಧಿಕಾರಿ, ಪುತ್ತೂರು ದ.ಕ.